ವಿಜಯ ಕರ್ನಾಟಕ | ಮಂಗಳವಾರ, 5 ಫೆಬ್ರವರಿ 2008 | ಬೆಂಗಳೂರು

# ಮರನೆಟ್ಟು ಕಾಡು ಕಳೆದು ಕೊಳ್ಳುವುದು ಹೀಗೆ..

**ಕ್ಯಾಂಪಾದಲ್ಲಿರುವ ಬೃಹತ್ ಮೊತ್ತದ ನಿಧಿ'ಮಧ್ಯರಾತ್ರಿ ಬಿಸಿಲಿಗೆ ಕೊಡೆಹಿಡಿಯುವ'' ಯೋಜನೆಗಳನ್ನು ಹುಟ್ಟುಹಾಕುತ್ತಿವೆ. ಈ ನಿಧಿಯನ್ನು ನಬಾರ್ಡ್‌ಗೆ ವರ್ಗಾಯಿಸಿ, ಮರನೆಡುವ ಜನರಿಗೆ ಹಂಚುವ ಯೋಜನೆ ಹಾಕಿಕೊಂಡಿದೆ. ನಾಗರಿಕರು, ಜನನಾಯ್ಕುಕರು ದೇಶಕ್ಕೆ ಹಸುರುಡಿಗೆ ಉಡಿಸುವ ಈ ಅರಣ್ಯೀಕರಣ ಯೋಜನೆಗಳನ್ನು ಬಹಳ ಮುಖ್ಯ ಎಂದುಕೊಂಡಾಗಲೇ ಎಡವಟ್ಟಾಗುವುದು.**

ಜನಸಂಖ್ಯಾ ಸ್ಫೋಟದ ಮೊಟ್ಟಮೊದಲ ದುಷ್ಪರಿಣಾಮ ಅರಣ್ಯನಾಶ. ಮಾನವನ ಹಿಂಗದ ಭೂಹಸಿವು ನಮ್ಮ ಕಾಡುಗಳನ್ನು ನಾಶಮಾಡುತ್ತಾ ಬಂದಿದ್ದು, ಇಂದು ಆಂತಕಕಾರಿ ಪ್ರಮಾಣವನ್ನು ಮುಟ್ಟಿದೆ. 1950-80ರ ನಡುವೆ ಸುಮಾರು 50 ಲಕ್ಷ ಹೆಕ್ಟೇರ್ ಕಾಡುಗಳು ಅರಣ್ಯೇತರ ಚಟುವಟಿಕೆಗೆ ಬಳಕೆಯಾಗಿದೆ. ಇದರ ಪರಿಣಾಮ ಭಾರತದ ಒಟ್ಟಾರೆ ಅರಣ್ಯಪ್ರದೇಶ ಕೇವಲ ಶೇ. 19ಕ್ಕೆ ಇಳಿದಿದೆ. ನದಿಗಳು ನಮ್ಮ ನೀರಾವರಿಯ ಬಹುಮುಖ್ಯ ಅಂಗ ಎನ್ನುವುದಾದರೆ, ನಾವು ಕಳೆದು ಕೊಳ್ಳುತ್ತಿರುವ ಕಾಡುಗಳೆಲ್ಲಾ ನದಿಗಳ ಮೂಲ. ಹೀಗಿದ್ದೂ, ಅರಣ್ಯೇತರ ಚಟುವಟಿಕೆಗಳಿಗೆ ಅರಣ್ಯದ ಬಳಕೆ ಯಾವುದೇ ಅಡೆತಡೆಯಿಲ್ಲದೇ ಮುಂದುವರಿದಿದೆ.

ಕಾಡುಗಳ ರಕ್ಷಣೆ ರಾಜಕೀಯ ಒತ್ತಾಸೆಯನ್ನು ಕಳೆದು ಕೊಂಡಿರುವ ಈ ದಿನಗಳಲ್ಲಿ ಸರ್ವೋಚ್ಚ ನ್ಯಾಯಾಲಯ ಕಾಡಿನ ಬಳಕೆ ಹಾಗೂ ವನ್ಯಜೀವಿ ಆವಾಸಗಳನ್ನು ಅತಿಕ್ರಮಿಸುವ ಅಭಿವೃದ್ಧಿ ಯೋಜನೆಗಳ ಮೇಲೆ ನಿರ್ಬಂಧವನ್ನು ಹೇರಿದೆ. ಈ ಬಾಬ್ತಿನ ಸುಮಾರು ಐದು ಸಾವಿರ ಕೋಟಿ ರೂ.ಗಳು ಕ್ಯಾಂಪಾ (ಕಾಂಪೆನ್ಸೇಟರಿ ಅಫಾರಸ್ಟೇಷನ್ ಫಂಡ್ ಮ್ಯಾನೇಜ್‌ಮೆಂಟ್ ಅಂಡ್ ಪ್ಲಾನಿಂಗ್ ಅಥಾರಿಟಿ) ನಿಧಿಯಲ್ಲಿ ಶೇಖರಣೆಯಾಗಿದೆ. ಈ ನಿಧಿಯಲ್ಲಿ ಕಾಡು ಗಳನ್ನು ಅರಣ್ಯೇತರ ಚಟುವಟಿಕೆಗಾಗಿ ಬಳಸಿಕೊಂಡಾಗ ನೀಡಬೇಕಾದ ಹಣವನ್ನೂ ಒಳಗೊಂಡಿದೆ. ಈ ಬೃಹತ್ ನಿಧಿಯ ಹೊಣೆ ಸದ್ಯಕ್ಕೆ ಕೇಂದ್ರ ಸರಕಾರ ಅರಣ್ಯ ಮತ್ತು ಪರಿಸರ ಸಚಿವಾಲಯದ ಅಧೀನದಲ್ಲಿದೆ.

ಅದು ಈ ಹಣವನ್ನು ಪರಿಹಾರಾತ್ಮಕ ಕಾಡುಬೆಳೆಸುವ ಯೋಜನೆಗಳಿಗೆ ವಿನಿಯೋಗಿಸುವ ಸಿದ್ಧತೆಯಲ್ಲಿದೆ. ಆದರೆ, ಪ್ರಾಯೋಗಿಕವಾಗಿ ಈ ಯೋಜನೆಯಿಂದ ಮೂಲ ಕಾಡು ನಾಶವಾದರೆ, ಈ ಮರ ನೆಡುವುದರಿಂದ ಮತ್ತೊಂದು ರೀತಿಯ ಆವಾಸವಾದ ಹುಲ್ಲುಗಾವಲು, ಕುರುಚಲು ಕಾಡುಗಳು ನಾಶವಾಗುತ್ತವೆ. ಈ ಬಗೆಯ 'ಅರಣ್ಯೀಕರಣ' ಅಪಾಯಕಾರಿ ಎಂಬುದು ಒಂದೆಡೆಯಾದರೆ, ಕ್ಯಾಂಪಾದಲ್ಲಿರುವ ಬೃಹತ್ ಮೊತ್ತ 'ಮಧ್ಯರಾತ್ರಿ ಬಿಸಿಲಿಗೆ ಕೊಡೆಹಿಡಿಯುವ'' ಯೋಜನೆಗಳನ್ನು ಹುಟ್ಟುಹಾಕುತ್ತಿವೆ. ಈ ನಿಧಿಯನ್ನು ನಬಾರ್ಡ್‌ಗೆ ವರ್ಗಾಯಿಸಿ, ಮರನೆಡುವ ಜನರಿಗೆ ಹಂಚುವ ಯೋಜನೆ ಹಾಕಿಕೊಂಡಿದೆ. ಇದು ನಿಶ್ಚಯವಾಗಿ ಹಣವನ್ನು ಗಾಳಿಗೆ ತೂರುವ ಯೋಜನೆ. ನಾಗರಿಕರು ಈ ದೇಶಕ್ಕೆ ಹಸುರುಡಿಗೆ ಉಡಿಸುವ, ಅರಣ್ಯೀಕರಣ ಯೋಜನೆಗಳನ್ನು ಬಹಳ ಮುಖ್ಯ ಎಂದುಕೊಳ್ಳುತ್ತಾರೆ. ಅಂತೆಯೇ, ರಾಜಕಾರಣಿಗಳು ಜನಪ್ರಿಯ, ಪರಿಸರ ಸಮಸ್ಯೆಗೆ ರಾಮಬಾಣ ಎಂದು ಕೊಂಡು ಅರಣ್ಯಗಳನ್ನು ಪುನಃಶ್ಚೇತನಗೊಳಿಸಿದ್ದೇವೆ ಎಂದು ಬೀಗುತ್ತಾರೆ. ಆದರೆ, ವಾಸ್ತವವೇ ಬೇರೆ. ಈ ಜನಪ್ರಿಯ ಯೋಜನೆಯಿಂದ ಕಾಡು ಗಳಿಗೆ ಯಾವ ಪ್ರಯೋಜನವೂ ಇಲ್ಲ . ಅಣೆಕಟ್ಟು, ಗಣಿ, ಹೆದ್ದಾರಿಗಳು ಹಾಗೂ ಅಲ್ಲಲ್ಲಿ ಮಾನವ ವಸಾಹತುಗಳಿಂದ ಛಿದ್ರೀಕರಣಕ್ಕೊಳಗಾಗಿರುವ ಕಾಡುಗಳು ನಮ್ಮ ಜೀವವೈವಿಧ್ಯತೆ, ಅರಣ್ಯ ಸಂರಕ್ಷಣೆಗೆ ದೊಡ್ಡ ಕುತ್ತು . ಇದನ್ನು ವೈಜ್ಞಾನಿಕ ಸಂಶೋಧನೆಗಳು ತಿಳಿಸಿಕೊಟ್ಟಿವೆ. ಹೀಗೆ ಒಂದು ದೊಡ್ಡ ಅರಣ್ಯ ಛಿದ್ರೀಕರಣಕ್ಕೊಳಗಾದಾಗ ಆ ಕಾಡು ಸಣ್ಣ ಸಣ್ಣ ದ್ವೀಪಗಳಂತಾಗುತ್ತವೆ. ಈ ದ್ವೀಪದ ಅಂಚುಗಳು ಜನಚಟುವಟಿಕೆಯ ಕೇಂದ್ರವಾಗಿ ಇಡೀ ಕಾಡು ಹಾನಿಗೀಡಾಗುತ್ತದೆ. ವ್ಯಾಪಕವಾಗಿದ್ದ ಕಾಡುಗಳು ಜನಸಮುದಾಯಗಳ ನಡುವೆ ದ್ವೀಪಗಳಾಗಿ ದೊಡ್ಡ ಪ್ರಾಣಿ ಪ್ರಭೇದದ ಸಂಖ್ಯೆ ಹಾಗೂ ಇಡೀ ಪ್ರಾಣಿ ಸಮೂಹದ ಮೇಲೆ ದುಷ್ಪರಿಣಾಮ ಬೀರುತ್ತದೆ. ದಟ್ಟಬಳ ಕಾಡಿನ ಅಪರೂಪದ ಸಸ್ಯ ಮತ್ತು ಪ್ರಾಣಿ ಪ್ರಭೇದಗಳು ನಾಶವಾಗಿ ಸಾಮಾನ್ಯ ಪ್ರಭೇದಗಳು ಸರ್ವವ್ಯಾಪಿಯಾಗುತ್ತವೆ.



ಈ ಛಿದ್ರೀಕರಣ ಅರಣ್ಯ ಸಂಪನ್ಮೂಲಗಳ ಲೂಟಿ ಮತ್ತು ಕಳ್ಳಬೇಟೆಗೂ ಕಾರಣವಾಗುತ್ತದೆ. ದಟ್ಟ ಅಭೇದ್ಯ ಕಾಡಿನ ನಡುವೆ ರಸ್ತೆ ಇತ್ಯಾದಿಗಳು ಬಂದ ನೇರ ಪರಿಣಾಮವಿದು. ಇವಕ್ಕೆ ಕಳಸವಿಟ್ಟಂತೆ ಮಾನವ - ವನ್ಯಜೀವಿ ಸಂಘರ್ಷ ತಲೆದೋರುತ್ತದೆ. ಒಂದೇ ಆಹಾರ ಮೂಲಕ್ಕೆ ಪೈಪೋಟಿ ನಡೆಸುವಾಗ ಹುಲಿ, ಚಿರತೆಗಳು ದನಗಳನ್ನು ತಿಂದರೆ, ಆನೆಗಳು ಬತ್ತದ ಗದ್ದೆ ಹಾಗೂ ತೋಟಗಳಿಗೆ ದಾಳಿಯಿಡುತ್ತವೆ. ಇಂತಹ ವನ್ಯಜೀವಿ-ಮಾನವ ಸಂಘರ್ಷಗಳಲ್ಲಿ ವನ್ಯಜೀವಿಗಳು ಸೋಲುವುದು ಸಹಜ ತಾನೆ? ಇಂತಹ ಛಿದ್ರೀಕರಣ ಈಗಾಗಲೇ ನಮ್ಮ ಕಾಡುಗಳಲ್ಲಿನ ದೊಡ್ಡ ಗಾತ್ರದ ಸಸ್ತನಿ ಪ್ರಾಣಿಗಳ ವ್ಯಾಪ್ತಿ ಹಾಗೂ ಹರವನ್ನು ಕಿರಿದಾಗಿಸಿದೆ. ಭಾರತದಲ್ಲಿನ ಹುಲಿ, ಸಿಂಗಲೀಕಗಳ ಸಂಖ್ಯೆ ಹಿಂದೆಗಿಂತ ಶೇ 5ಕ್ಕೆ ಇಳಿದಿದೆ. ಚೀತಾ ಭಾರತದಿಂದ ಕಣ್ಮರೆಯಾಗಿದೆ. ಸಿಂಹ ಹಾಗೂ ಖಡ್ಗಮೃಗಗಳು ಅಕ್ಷರಶಃ ಒಂದೊಂದು ಆವಾಸಗಳಲ್ಲಿ ಮಾತ್ರ ಉಳಿದುಕೊಂಡಿವೆ. ಹಾಗಾಗಿ, ಇಂದಿನ ತುರ್ತು ಅಗತ್ಯವೆಂದರೆ, ಛಿದ್ರೀಕರಣಗೊಂಡಿರುವ ಕಾಡನ್ನು ಒಂದುಗೂಡಿಸುವುದು ಹಾಗೂ ಈಗಾಗಲೇ ಛಿದ್ರೀಕರಣಕ್ಕೊಳಗಾಗಿರುವ ಕಾಡುಗಳಲ್ಲಿನ ಮಾನವ ಅತಿಕ್ರಮವನ್ನು ತಡೆಯುವುದು ಅಥವಾ ಕನಿಷ್ಠ ಮಟ್ಟಕ್ಕಿಳಿಸುವುದು. ಈ ಪ್ರಯತ್ನ ಮುಂದಿನ ಜನಾಂಗಕ್ಕೆ ನಮ್ಮ ಕೊಡುಗೆಯಾಗಬಹುದು. ಈ ಆಲೋಚನೆಗಳು ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯದ ಯೋಜನೆಗಳಲ್ಲಿಲ್ಲ. ಸಚಿವಾಲಯ ಇಂದಿಗೂ ಈ ಅತಿಮುಖ್ಯ ಮಾಹಿತಿಯಿರದ ಅನೇಕ ಅಭಿವೃದ್ಧಿ ಯೋಜನೆಗಳಿಗೆ 'ಹಸಿರು ಬಾವುಟ' ತೋರಿಸುತ್ತಿದೆ .

**ಪರಿಹಾರ ಮಾರ್ಗ:** ಶತಕೋಟಿ ಜನಸಂಖ್ಯೆ ಹಾಗೂ ಶೇ 8ರ ಆರ್ಥಿಕ ಬೆಳವಣಿಗೆ ಅಲ್ಪಪ್ರಮಾಣದ ಅರಣ್ಯನಾಶಕ್ಕೆ ಕಾರಣವಾಗುತ್ತದೆ. ಆದರೆ, ಇದರಿಂದಾಗುವ ತೊಂದರೆಗಳನ್ನು ತಗ್ಗಿಸಲು, ಛಿದ್ರೀಕರಣವನ್ನು ತಡೆಯಲು ನಾವು ಶ್ರಮಿಸಬೇಕಾಗಿದೆ. ದೊಡ್ಡ ಅರಣ್ಯ ದ್ವೀಪಗಳನ್ನು ಒಂದುಗೂಡಿಸಿ, ಉತ್ತಮ ಸಂರಕ್ಷಣಾ ಮಾರ್ಗಗಳಿಂದ ಅವು ನೈಸರ್ಗಿಕವಾಗಿ ಚೇತರಿಸಿಕೊಳ್ಳುವಂತೆ ನೋಡಿಕೊಳ್ಳಬೇಕಾದ ಬಹುದೊಡ್ಡ ಕಾರ್ಯ ನಮ್ಮ ಮುಂದಿದೆ. ಈ ಸಂದರ್ಭದಲ್ಲಿ ಬರುವ ಸಂಕೀರ್ಣ ವಿಷಯವಾದ ಕಾಡಿನ ಜನರ ಪುನರ್ವಸತಿಯನ್ನು ಸಾಮಾಜಿಕ ನ್ಯಾಯ ಆಧಾರದ ನೀಡಬೇಕಾಗಿದೆ.

ಸಾರಿಸ್ಕ ಹುಲಿ ದುರಂತದ ನಂತರ ರಚಿಸಿದ ಹುಲಿ ಕಾರ್ಯಪಡೆ ಸರಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ, ಹುಲಿಗಳು ಬದುಕಿ ಉಳಿಯ ಬೇಕಾದರೆ ಅನುಸರಿಸಬೇಕಾದ ಮಾರ್ಗಗಳ ಬಗ್ಗೆ ಚರ್ಚಿಸಲಾಗಿದೆ. ಅದರಲ್ಲಿ ಬಹುಮುಖ್ಯವಾದದ್ದು, ಹುಲಿಗಳ ಸೂಕ್ಷ್ಮ ಆವಾಸಗಳನ್ನು ಮಾನವ ಅತಿಕ್ರಮಣ ಹಾಗೂ ಹಸ್ತಕ್ಷೇಪಗಳಿಂದ ಮುಕ್ತಗೊಳಿಸುವುದು. ಇದೇ ಕಾರ್ಯಪಡೆ ಇದಕ್ಕಾಗಿ ರಕ್ಷಿತಾರಣ್ಯ ಗಳಲ್ಲಿರುವ ಸುಮಾರು 65,000 ಕುಟುಂಬಗಳಿಗೆ ಪುನ ರ್ವಸತಿ ಕಲ್ಪಿಸಬೇಕೆಂದೂ, ಈ ಕಾರ್ಯಕ್ಕೆ ಪ್ರತಿ ಕುಟುಂಬಕ್ಕೆ 2.5 ರೂ. ಲಕ್ಷ ಪರಿಹಾರದಂತೆ ಸುಮಾರು 1,663 ಕೋಟಿ ರೂ. ಬೇಕು ಎಂದು ಪ್ರಸ್ತಾಪಿಸಿದೆ. ಕ್ಯಾಂಪಾ ನಿಧಿಯಲ್ಲಿನ ಐದು ಸಾವಿರ ಕೋಟಿರೂಪಾಯಿಗಳು ಈ ಕಾರ್ಯಕ್ರಮಕ್ಕೆ ಅಗತ್ಯ ಹಣವನ್ನು ಒದಗಿಸುತ್ತದೆ. ಈ ಕಾಡುವಾಸಿ ಗಳಿಗೆ ಚಾರಿತ್ರಿಕವಾಗಿ ಆಗಿರುವ ಅನ್ಯಾಯವನ್ನು ಸರಿ ಪಡಿಸುವ ಸದವಕಾಶವನ್ನು ನೀಡಿದೆ. ಸರಕಾರ ಪರಿಹಾರಾತ್ಮಕ ವಾಗಿ ಕಾಡುಬೆಳೆಸುವ ಯೋಜನೆ - ನೈಸರ್ಗಿಕ ಪುನಶ್ಚೇತನ ವನ್ನು ಹೊರತುಪಡಿಸಿ - ಅವೈಜ್ಞಾನಿಕ ಎಂಬುದನ್ನು ಮನ ವರಿಕೆ ಮಾಡಿಕೊಳ್ಳಬೇಕು. ಹವಾಮಾನ ವೈಪರಿತ್ಯದ ಈ ದಿನಗಳಲ್ಲಿ ಎದುರಾಗುವ ಹೊಸ ಸವಾಲುಗಳನ್ನು ಎದುರಿಸಲು ಹಳೆಯ ನೈಸರ್ಗಿಕ ಕಾಡುಗಳು ನೆರವಾಗುತ್ತವೆ. ಆದರೆ ನೆಟ್ಟು ಬೆಳೆಸಿದ ಕಾಡುಗಳು ಪ್ರಯೋಜನಕ್ಕೆ ಬಾರದು.

ಭಾರತ ಇಂದು ಪರಿಸರ ಸಮತೋಲನವನ್ನು ಕಾಯ್ದುಕೊಳ್ಳುತ್ತಲೇ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸಬೇಕಾದ ಒತ್ತಡದಲ್ಲಿದೆ. ಈಗ ದೂರದೃಷ್ಟಿಯಿಲ್ಲದ ಗುಂಡಿ ತೋಡಿ ಗಿಡ ನೆಡುವಲ್ಲಿ ವಿಫಲವಾಗಿರುವ ಯೋಜನೆಗಳನ್ನು ಎರಡನೇ ಯೋಚನೆಯಿಲ್ಲದೆ ಹೊರ ದೂಡಬೇಕು. ನಾವೇನಾದರೂ ಈ ಹಣವನ್ನು ಗುಂಡಿ ತೋಡಿ ಗಿಡಬೆಳೆಸಲು ಪ್ಲಾಸ್ಟಿಕ್ ಚೀಲಕೊಳ್ಳಲು ಬಳಸಿದರೆ ಅದು ಮುಂದಿನ ಜನಾಂಗಕ್ಕೆ ಎಸಗುವ ಘೋರ ಅಪ ಚಾರವೂ, ನಮ್ಮ ಮಟ್ಟಿಗೆ ಮಹಾಪರಾಧವೂ ಆಗುತ್ತದೆ. ಕ್ಯಾಂಪಾದಲ್ಲಿರುವ ಹಣ ಛಿದ್ರೀಕರಣಕ್ಕೊಳಗಾಗಿರುವ ಕಾಡುಗಳನ್ನು ತಕ್ಕಮಟ್ಟಿಗೆ ಒಂದಾಗಿಸಲು, ವನ್ಯಜೀವಿ ಗಳಿಗೆ,ಅನ್ಯಾಯಕ್ಕೊಳಗಾಗಿರುವ ಕಾಡುವಾಸಿಗಳ ಕಲ್ಯಾಣಕ್ಕೆ ಬಳಸಿಕೊಳ್ಳುವಲ್ಲಿ ನಮ್ಮ ನಾಯಕರು ಬುದ್ಧಿವಂತಿಕೆ ತೋರಬೇಕಾಗಿದೆ.

**ಕೆ.ಎಸ್.ನವೀನ್**

(ಮೂಲ ಲೇಖನ: ಪ್ರವೀಣ್‌ಭಾರ್ಗವ್)